# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 628(779) |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ(ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಎಷ್ಟು ಪ್ರತಿಯೊಂದು ಯೋಜನೆಗೆ ಮಂಜೂರಾದ ಮೊತ್ತ, ಬಿಡುಗಡೆಯಾದ ಅನುದಾನ ಹಾಗೂ ಪ್ರಸ್ತುತ ಕಾಮಗಾರಿಯ ಪ್ರಗತಿ ಎಷ್ಟಿದೆ; | ಕೊಡಗು ಜಿಲ್ಲೆಯಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬೃಹತ್ ನೀರಾವರಿ ಯೋಜನೆಯಾದ ಹಾರಂಗಿ ಹಾಗೂ ಮಧ್ಯಮ ನೀರಾವರಿ ಯೋಜನೆಯಾದ ಚಿಕ್ಲಿಹೊಳೆ ಯೋಜನೆಗಳು ಬರುತ್ತಿದ್ದು, ಹಾರಂಗಿ ಯೋಜನೆಯಡಿಯಲ್ಲಿ ಪ್ರಸುತ್ತ ಎರಡು ನಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ, ಪ್ರಗತಿಗಳ ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| ಆ) | ಕೊಡಗು ಜಿಲ್ಲೆಯಲ್ಲಿ ಜಲಸಂಪನ್ಮೂಲ ಇಲಾಖೆಯಡಿ ಮಂಜೂರಾಗಿ ಕಾಮಗಾರಿ ಪ್ರಾರಂಭಗೊಂಡು ಅಪೂರ್ಣವಾಗಿರುವ ಯೋಜನೆಗಳು ಎಷ್ಟು; ಅವುಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | |
| ಇ) | ಕೊಡಗು ಜಿಲ್ಲೆಯಲ್ಲಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕೆರೆ, ಕಟ್ಟೆ, ಜಲಾಶಯ ಮತ್ತು ನೀರು ಸಂಗ್ರಹಣಾ ಘಟಕಗಳ ಸಂಖ್ಯೆ ಎಷ್ಟು; ಅವುಗಳ ದುರಸ್ತಿ ಹಾಗೂ ಪುನಶ್ಚೇತನಕ್ಕಾಗಿ ಕಳೆದ 03 ವರ್ಷಗಳಲ್ಲಿ ಎಷ್ಟು ಅನುದಾನ ಖರ್ಚು ಮಾಡಲಾಗಿದೆ; | ಕೊಡಗು ಜಿಲ್ಲೆ ವ್ಯಾಪ್ತಿಗೆ 10 ಸಂಖ್ಯೆ ಕೆರೆಗಳು ಬರುತ್ತವೆ. |
| ಈ) | ಕೊಡಗು ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಉಂಟಾಗುವ ಪ್ರವಾಹ ಮತ್ತು ನೀರಿನ ಹರಿವಿನಿಂದ ಕೃಷಿ ಭೂಮಿ ಹಾಗೂ ಸಾರ್ವಜನಿಕ ಆಸ್ತಿಗಳಿಗೆ ಹಾನಿಯಾಗುತ್ತಿರುವ ಹಿನ್ನಲೆಯಲ್ಲಿ ಪ್ರವಾಹ ನಿಯಂತ್ರಣ ಮತ್ತು ನದಿ ತಡೆ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | (1) 2018-19ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಹಾರಂಗಿ ಜಲಾಶಯದ ಹಿನ್ನೀರಿನ catchment ಭಾಗಗಳಲ್ಲಿ ಭೂಕುಸಿತ ಉಂಟಾಗಿ ಇದರಿಂದ ಹಿನ್ನೀರಿನ ಪ್ರಮುಖ ನದಿಗಳಾದ ಹಟ್ಟಿಹೊಳೆ, ನಂದಿಮೊಟ್ಟೆ ಮತ್ತು ಹಮ್ಮಿಯಾಲ ನದಿಗಳಲ್ಲಿ ಭೂಕುಸಿತದಿಂದ ಬೆಟ್ಟ ಗುಡ್ಡಗಳಿಂದ ಕುಸಿದ ಮಣ್ಣು ನದಿಗಳಲ್ಲಿ ತುಂಬಿ ನೀರಿನ ಹರಿವಿನ ಪಥವನ್ನು ಬದಲಾಯಿಸಿ ಅಕ್ಕಪಕ್ಕದ ರೈತರ ತೋಟಗಳು, ಗದ್ದೆಗಳಿಗೆ ಮತ್ತು ರಸ್ತೆಗಳಿಗೆ ನೀರು ನುಗ್ಗಿ ಹಾನಿಯುಂಟಾಗಿರುತ್ತದೆ.<br><br>ಈ ಸಮಸ್ಯೆಗಳನ್ನು ತಡೆಗಟ್ಟುವ ಉದ್ದೇಶದಿಂದ ರೂ.130.00 ಕೋಟಿ ಮೊತ್ತದ REJUVENATION OF HARANGI CATCHMENT AREA AND PROTECTION WORKS TO HARANGI RIVER & ITS TRIBUTORIES ಕಾಮಗಾರಿ ಪ್ರಗತಿಯಲ್ಲಿರುತ್ತದೆ. ನದಿಗಳಲ್ಲಿ ಸೇರುವ ಮಣ್ಣನ್ನು ತಡೆಯಲು ಗೆಬಿಯನ್‌ವಾಲ್, ತಡೆಗೋಡೆ, ಸಿಲ್ಟ್ ಅರೆಸ್ಟರ್, ಚೆಕ್‌ಡ್ಯಾಂ ಹಾಗೂ ನದಿಗೆ ಅಡ್ಡಲಾಗಿ ಸೇತುವೆಗಳು ಮತ್ತು ಹೂಳು ತೆಗೆಯುವ ಕೆಲಸಗಳು |
| ಉ) | ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಯ ಪ್ರಮುಖ ನದಿಗಳ ತೀರದಲ್ಲಿ ಮಣ್ಣು ಕೊಚ್ಚಿ ಹೋಗುವುದನ್ನು ತಡೆಯಲು ಹಾಗೂ ನದಿ ತೀರ ಸಂರಕ್ಷಣೆಗಾಗಿ ಕೈಗೊಂಡಿರುವ ಕಾಮಗಾರಿಗಳು ಯಾವುವು? ಹಾಗೂ ಅವುಗಳಿಗೆ ಖರ್ಚಾದ ಅನುದಾನ ಎಷ್ಟು? | |

| | | |
|---|---|---|
| | | ಪ್ರಗತಿಯಲ್ಲಿದ್ದು, ಇದುವರೆಗೆ ಶೇಕಡ 40 ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>ಸದರಿ ಕಾಮಗಾರಿಗೆ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನ ಹಾಗೂ ವೆಚ್ಚದ ವಿವರಗಳು ಕೆಳಕಂಡಂತೆ ಇರುತ್ತದೆ.<br><br>**(ರೂ. ಕೋಟಿಗಳಲ್ಲಿ)** |

| ವಿವರ | 2023-24 | 2024-25 | 2025-26 |
|---|---|---|---|
| **ಅನುದಾನ** | 15.70 | 23.86 | 18.83 |
| **ವೆಚ್ಚ** | 0.53 | 1.81 | 0.06 |

(2) 2023-24ನೇ ಸಾಲಿನಲ್ಲಿ ಕುಶಾಲನಗರ ತಾಲ್ಲೂಕಿನ ಗುಮ್ಮನಕೊಲ್ಲಿ-ಮುಳ್ಳುಸೋಗೆಯ ಚಂದ್ರಕಲಾ ಲೇಔಟ್ ಬಳಿ ಬರುವ ಕಾವೇರಿ ನದಿಗೆ ಪ್ರವಾಹ ಸಂರಕ್ಷಣಾ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿರುತ್ತದೆ.

(3) ಗುಮ್ಮನಕೊಲ್ಲಿ ಮುಳ್ಳುಸೋಗೆಯ ತಪೋವನದ ಬಳಿ ಬರುವ ಕಾವೇರಿ ನದಿಗೆ ಪ್ರವಾಹ ಸಂರಕ್ಷಣಾ ಕಾಮಗಾರಿಯ ಗುತ್ತಿಗೆ ಕರಾರು ಆಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿರುತ್ತದೆ.

**ಸಂಖ್ಯೆ : ಜಸಂಇ 65 ಎನ್‌ಎಲ್‌ಎ 2026**

**(ಎನ್. ಚಲುವರಾಯಸ್ವಾಮಿ)**
**ಜಲಸಂಪನ್ಮೂಲ ಸಚಿವರು**

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 628 (779) ಕ್ಕೆ ಅನುಬಂಧ

(ರೂ.ಕೋಟಿಗಳಲ್ಲಿ)

| ಕ್ರ. ಸಂ | ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಬಿಡುಗಡೆಯಾದ ಅನುದಾನ | ಗುತ್ತಿಗೆ ಮೊತ್ತ | ಈವರೆಗಿನ ವೆಚ್ಚ | ಶೇಕಡವಾರು ಭೌತಿಕ ಪ್ರಗತಿ | ಪ್ರಸ್ತುತ ಹಂತ |
|---|---|---|---|---|---|---|---|---|
| 1. | ಕುಶಾಲ ನಗರ | Remodeling and Improvements Distributory 1 to 18 of Harangi Left Bank canal under Harangi reservoir project-4025 | 49.90 | 0.00 | 51.43 | 0 | 50 | ಮುಖ್ಯ ನಾಲೆಯಲ್ಲಿ ಬರುವ ವಿತರಣಾ ನಾಲೆಗಳ (ವಿತರಣಾ ಕಾಲುವೆ 1 ರಿಂದ 18) ರೀ-ಮಾಡಲಿಂಗ್ ಕಾಮಗಾರಿಯನ್ನು ಪೇವರ್ ಲೈನಿಂಗ್ ಕಾಮಗಾರಿ ಒಟ್ಟು ಉದ್ದ 41.248 ಕಿ.ಮೀ ನಲ್ಲಿ ಲೈನಿಂಗ್ ಕಾಮಗಾರಿ, 496 ಸಂಖ್ಯೆ ಸಿ.ಡಿ. ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದ್ದು, ಒಟ್ಟು 41.248 ಕಿ.ಮೀ. ರಲ್ಲಿ 5.00 ಕಿ.ಮೀ. ಲೈನಿಂಗ್ ಹಾಗೂ 22.00 ಕಿ.ಮೀ ಬಾಕ್ಸ್ ಡ್ರೈನ್ ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. |
| 2. | ಕುಶಾಲ ನಗರ | Re Modelling of Harangi left bank Canal from Ch 6.875km to 14.750km Km under Haranagi Reservoir Project. | 72.25 | 15.55 | 74.79 | 15.55 | 75 | ಹಾರಂಗಿ ಎಡದಂಡೆ ಮುಖ್ಯ ನಾಲೆಯು ಸರಪಳಿ 6.875 ಕಿ.ಮೀ ರಿಂದ 14.75 ಕಿ.ಮೀ. ರಲ್ಲಿ ಒಟ್ಟು ಉದ್ದ 7.875 ಕಿ.ಮೀ ನಲ್ಲಿ 6.355 ಕಿ.ಮೀ ಪೇವರ್ ಲೈನಿಂಗ್, 1.070 ಕಿ.ಮೀ ಮ್ಯಾನ್ಯುಲ್ ಲೈನಿಂಗ್, 0.45 ಕಿ.ಮೀ ಕಟ್ ಅಂಡ್ ಕವರ್ ಮತ್ತು 51 ಸಂಖ್ಯೆ ಸಿ.ಡಿ. ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಒಟ್ಟು 7.875 ಕಿ.ಮೀ.ರಲ್ಲಿ 6.355 ಕಿ.ಮೀ. ಪೇವರ್ ಲೈನಿಂಗ್ ಮುಕ್ತಾಯಗೊಂಡಿರುತ್ತದೆ. |